1995-96ರಲ್ಲಿ ಒಡೆದ ಆ ಕಾಲುವೆಯನ್ನು ರಿಪೇರಿ ಮಾಡಿದರು. ಆವಾಗಲೂ ಕೂಡ, ಪೂರ್ತಿ ಕಾಲುವೆಯೊಳಗೆ ನೀರು ಬಿಡುವುದಕ್ಕಾಗಲೇ ಇಲ್ಲ. ತದನಂತರ, ಈ ವರ್ಷವೂ ಕೂಡ ನಿಗದಿತ ಅವಧಿಯೊಳಗೆ ಟೆಂಡರ್ ಕರೆದು, ಅದನ್ನು ಮುಗಿಸದಿದ್ದರಿಂದ, 3 ತಾಲ್ಲೂಕುಗಳೆಂದರೆ-ರಾಮದುರ್ಗ, ಬಾದಾಮಿ ಮತ್ತು ಸವದತ್ತಿ ರೈತರಿಗೆ ಇನ್ನೂವರೆಗೆ ನೀರು ಕೊಡುವುದಕ್ಕಾಗಲಿಲ್ಲ. ಆಗಸ್ಟ್ 15ರಂದು ಅದನ್ನು ಮುಗಿಸಬೇಕಾಗಿತ್ತು. ಏಪ್ರಿಲ್‌ನಲ್ಲಿ ಅದನ್ನು ರಿಪೇರಿ ಮಾಡುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದರು. ಇವತ್ತು 26ನೇ ತಾರೀಖು. ಈ 26ನೇ ತಾರೀಖಿನವರೆಗೂ ಸಹ ಕಾಲುವೆಯೊಳಗೆ ನೀರು ಹರಿಸುವುದಕ್ಕಾಗಲಿಲ್ಲ. ಇದರಿಂದ ಮೂರು ತಾಲ್ಲೂಕಿನ ರೈತರಿಗೆ ಅಪಾರ ಹಾನಿಯಾಗಿದೆ. ಬಹಳಷ್ಟು ತೊಂದರೆಯಾಗಿದೆ. ಆ ದೃಷ್ಟಿಯಿಂದ ಯಾವ ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದ್ದಾರೆ, ಅವರ ಮೇಲೆ ಯಾವುದಾದರೊಂದು ಶಿಸ್ತಿನ ಕ್ರಮ ಕೈಗೊಂಡು, ರೈತರಿಗೆ ಆಗಿರುವ ತೊಂದರೆಯನ್ನು ನಿವಾರಿಸುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವುದನ್ನು ದಯವಿಟ್ಟು ಹೇಳಬೇಕು.

ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಸಚಿವರು): ಮಾನ್ಯ ಛೇರ್ಮನ್‌ರವರೆ, 1996ನೇ ಇಸವಿಯ 10ನೇ ತಿಂಗಳ 18 ಮತ್ತು 27ನೇ ದಿವಸ ಭಾರೀ ಮಳೆ ಬಿದ್ದಿದ್ದರಿಂದ, ಮಲಪ್ರಭಾ 5ನೇ ಕಿ.ಮೀನಲ್ಲಿ, ಪ್ರವಾಹ ಬಂದು ಒಡೆದುಹೋಯಿತು. ತಮಗೆ ಗೊತ್ತಿರುವಂತೆ ಅದನ್ನು 1996-97ರಲ್ಲಿ ಸುಮಾರು 35ಲಕ್ಷ ರೂಪಾಯಿ ಸಿ.ಡಿ.ವರ್ಕ್ಸ್ ಅಂದರೆ ಮಾಸ್ ಕಾಂಕ್ರೀಟ್ ಪೈಪ್ ಕಲ್ವರ್ಟ್ ಎಂದು ಏನು ಹೇಳುತ್ತೇವೆ ಅದಕ್ಕೆ ಟೆಂಡರ್ ಕರೆದು 25ನೇ ತಾರೀಖಿನ ದಿವಸ ಅದು ಮುಗಿದಿದೆ. ಇವತ್ತು ಮಲಪ್ರಭಾ ಇರಿಗೇಷನ್ ಕನ್ಸಲ್ಟೇಟಿವ್ ಕಮಿಟಿ ಮೀಟಿಂಗ್ ನಡೆದಿದೆ. ಈ ಕನ್ಸಲ್ಟೇಟಿವ್ ಕಮಿಟಿ ಮೀಟಿಂಗ್‌ನಲ್ಲಿ 1,350 ಕ್ಯೂಸೆಕ್ಸ್ ನೀರು, ಮಲಪ್ರಭಾ ಎಡದಂಡೆ ನಾಲೆಗೆ ಹೋಗಬೇಕಾಗಿದೆ; ಇವತ್ತಿನ ದಿವಸ ಅವರು ಯಾವ ದಿನಾಂಕವನ್ನು ನಿಗದಿ ಮಾಡಿ ನೀರನ್ನು ಬಿಡಬೇಕೆಂದು ಹೇಳುತ್ತಾರೋ, ಆ ದಿನಾಂಕದಂದು ನೀರನ್ನು ಬಿಡುತ್ತೇವೆ. ಕೆಲಸವಂತೂ ನಿನ್ನೆಗೇ ಮುಗಿದಿದೆ ಎಂದು ನನಗೆ ವರ್ತಮಾನ ದೊರೆತಿದೆ.

(ಊ) ತೀರ್ಥಹಳ್ಳಿ ತಾಲ್ಲೂಕಿನ ತುಂಗಾನದಿಯಲ್ಲಿ ಸಿಗುವ ಮರಳನ್ನು ಪ್ರತಿ ದಿವಸ ಸಾಗಣೆಕೆ ಮಾಡುತ್ತಿರುವುದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟ,

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಛೇರ್ಮನ್‌ರವರೆ ತೀರ್ಥಹಳ್ಳಿ ತಾಲ್ಲೂಕಿನ ತುಂಗಾ ನದಿಯಲ್ಲಿ ಪ್ರಕೃತಿದತ್ತವಾಗಿ ಸಿಗುವ ಮರಳು ಬಹಳ ಉತ್ಕೃಷ್ಟವಾಗಿರತ್ತದೆಂದು ಹೇಳಿ, ಶಿವಮೊಗ್ಗ ಮತ್ತು ಭದ್ರಾವತಿ ನಗರಗಳಿಗೆ ಬಿಲ್ಡಿಂಗ್ ಕಟ್ಟಲಿಕ್ಕೋಸ್ಕರ ಈ ಮರಳು ವ್ಯಾಪಕವಾಗಿ ಹೋಗುತ್ತಿದೆ. ದಿನಕ್ಕೆ ಸುಮಾರು 200 ಲಾರಿಗಳಷ್ಟು ಮರಳು ಹೋಗುತ್ತಿದೆ. ನಮ್ಮ ಗಣಿ ಖಾತೆಯ ಭೂವಿಜ್ಞಾನಿಯೊಬ್ಬರು ಶಿವಮೊಗ್ಗದಲ್ಲಿದ್ದಾರೆ. ಇವರು ಗುತ್ತಿಗೆ ಕೊಡತಕ್ಕವರು. ಸುಮಾರು 4 ವರ್ಷಗಳಿಂದ

ಭೂ ವಿಜ್ಞಾನಿಯಾಗಿ ಶಿವಮೊಗ್ಗದಲ್ಲಿದ್ದಾರೆ. ಇದರಿಂದ, ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಆದಾಯವನ್ನು ನಷ್ಟಮಾಡಿ, ಕೋಟಿಗಟ್ಟಲೆ ಹಣವನ್ನು ಅಲ್ಲಿ ಗುತ್ತಿಗೆದಾರರು ಮತ್ತು ಆ ಭೂ ವಿಜ್ಞಾನಿ ಸೇರಿಕೊಂಡು ಲಪಟಾಯಿಸುತ್ತಿದ್ದಾರೆ. ಸರ್ಕಾರಕ್ಕೂ ಸಿಗುವುದಿಲ್ಲ, ಜನಕ್ಕೂ ಕೂಡ ಮರಳು ಕಡಿಮೆ ದರದಲ್ಲಿ ಸಿಗದೆ, ಅಪಾರವಾದ ರೇಟು, ಒಂದೇ ಪರ್ಮಿಟ್‌ನಲ್ಲಿ ಹತ್ತಾರು ಲೋಡುಗಳನ್ನು ಹೊಡೆಯುವಂಥಾದ್ದು, ಪರ್ಮಿಟ್ ಇಲ್ಲದೇ ಡೂಪ್ಲಿಕೇಟ್, ಪ್ರಿಂಟ್ ಮಾಡಿ ಸ್ವತಃ ಆ ಭೂವಿಜ್ಞಾನಿ ಸೇರಿಕೊಂಡು ಲಾರಿ ಮಾಲೀಕರಿಗೆ ಕೊಟ್ಟು ಅದನ್ನು ಸಾಗಾಣಿಕೆ ಮಾಡತಕ್ಕ ದಂಧೆಯಲ್ಲಿ ತೊಡಗಿದ್ದಾರೆ. ವಿಶೇಷವಾಗಿ, ತುಂಗಾ ನದಿಯಲ್ಲಿ ಅರಣ್ಯ ಇಲಾಖೆಯವರು, ರಾತ್ರಿ ಹೊತ್ತು ಅಲ್ಲಿ ಲೋಡು ಮಾಡಬಾರದು, ಇದರಿಂದಾಗಿ ಅಪಾರವಾಗಿರತಕ್ಕ ಮರಮುಟ್ಟುಗಳು ಕಳ್ಳತನವಾಗುತ್ತವೆ ಎಂಬುದಾಗಿ ತಿಳಿಸಿದ್ದಾರೆ. ಅದನ್ನು ವರದಿ ಮಾಡಿದ ನಂತರವೂ ಸಹ, ಆ ಭೂವಿಜ್ಞಾನಿ ರಾತ್ರಿ ಹೊತ್ತು ಅಲ್ಲಿ ಲೋಡ್ ಮಾಡಲಿಕ್ಕೆ ಯಾವುದೇ ಕಾಯ್ದೆ ಮಿತಿ ಇಲ್ಲವೆಂದು, ಲೋಡ್ ಮಾಡಬಹುದೆಂದು ಹೇಳಿ, ಪರವಾನಗಿಯನ್ನು ಮತ್ತೆ ಮತ್ತೆ ಕೊಟ್ಟಿದ್ದಾರೆ. ಸರ್ಕಾರೀ ಅರಣ್ಯ ಇಲಾಖೆಯಿಂದ ಬೆಳೆಸಿರತಕ್ಕ ಸಾಗವಾನಿ, ತೇಗದ ಮರಗಳನ್ನು ಅಪಾರವಾಗಿ ಲೂಟಿ ಮಾಡಲಾಗಿದೆ. ಬೇರೆ ಯಾವುದೇ ಇಲಾಖಾಧಿಕಾರಿಗಳು ಕೂಡ ಇದನ್ನು ಚೆಕ್ ಮಾಡತಕ್ಕ ಹವಣಿಕೆಯಲ್ಲಿಲ್ಲ. ಇದನ್ನು ನಾನು ಅನೇಕ ಸಾರಿ ಮಾನ್ಯ ಮಂತ್ರಿಗಳ ಗಮನಕ್ಕೂ ತಂದರೂ, ಅಲ್ಲಿರತಕ್ಕ ಭೂ ವಿಜ್ಞಾನಿಯನ್ನು ಬದಲಾವಣೆ ಮಾಡದೆ, ತಪಾಸಣೆ ಮಾಡದೆ, ಸುಮಾರು 50 ಲಕ್ಷ ರೂಪಾಯಿಗಳಷ್ಟು ಆಸ್ತಿಯನ್ನು ಆ ಭೂ ವಿಜ್ಞಾನಿ ಮತ್ತು ಅಲ್ಲಿನ ಎಫ್.ಡಿ.ಎ.ಯೊಬ್ಬರು ಮಾಡಿ, ಒಂದು ದೊಡ್ಡ ಮನೆಯನ್ನು ಶಿವಮೊಗ್ಗದಲ್ಲಿ ಕಟ್ಟುತ್ತಿದ್ದಾರೆ. ಭಾರಿ ಆಸ್ತಿ ಮಾಡಿದ್ದಾರೆ. ಅದಾವುದನ್ನೂ ಕೂಡ ತಪಾಸಣೆ ಮಾಡದೆ, ಈ ರೀತಿಪ್ರಕೃತಿದತ್ತವಾಗಿ ಬಂದಿರತಕ್ಕ ಮರಗಳನ್ನು ಲೂಟಿ ಹೊಡೆಯಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಸರ್ಕಾರ ಇದರ ಬಗ್ಗೆ ಗಮನಹರಿಸಿ, ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟವನ್ನು ತುಂಬಿಕೊಳ್ಳದ್ದಕ್ಕೆ ಆ ಭೂ ವಿಜ್ಞಾನಿಯನ್ನು ತನಿಖೆಗೊಳಪಡಿಸಿ, ಅವನ ಆಸ್ತಿಯನ್ನು ತಪಾಸಣೆಗೊಳಪಡಿಸಿ, ಅವನಿಗೆ ಶಿಕ್ಷೆ ವಿಧಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತಾ, ದಯವಿಟ್ಟು, ಆ ಲೂಟಿಯಾಗುತ್ತಿರುವ ಮರಳನ್ನು ಕೂಡ ತಡೆಗಟ್ಟಬೇಕೆಂದು ನಾನು ಸರ್ಕಾರಕ್ಕೆ ವಿನಂತಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಮ್ಮ ಕಡೆ ಕೂಡ ಮರಳನ್ನು ವಿಪರೀತವಾಗಿ ತುಂಬಿಕೊಂಡು ಹೋಗುತ್ತಿರುವುದರಿಂದ ಯಾವ ರೀತಿಯಾಗಿದೆ ಎಂದರೆ, ಹಳ್ಳಿಗಳಲ್ಲಿ ಮರಳು ಲಾರಿಗಳು ತುಂಬಿಕೊಂಡು ಓಡಾಡುತ್ತಿರುವುದರಿಂದ ರಸ್ತೆ, ಮೋರಿ ಎಲ್ಲಾ ಮುರಿದು, ಬಿದ್ದು ಹೋಗಿವೆ. ಮತ್ತೆ ಆ ಇಡೀ ಹಳ್ಳಿ ವಾತಾವರಣವೇ ಕೆಟ್ಟುಹೋಗಿ ಬಿಡುತ್ತಿದೆ. ಆ ರೀತಿಯ ಪರಿಸ್ಥಿತಿ ಉಂಟಾಗಿದೆ. ಇದಕ್ಕೇನಾದರೂ ಸರ್ಕಾರ ಒಂದು ಕ್ರಮ ತೆಗೆದುಕೊಂಡು ನಿಷೇಧ ಮಾಡಬೇಕು ಮತ್ತು ಇದಕ್ಕೇನಾದರೂ ರೆಗ್ಯುಲೇಟ್ ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಶ್ರೀ ಅರಗ ಜ್ಞಾನೇಂದ್ರರವರು ಒಳ್ಳೆಯ ಪ್ರಶ್ನೆಯನ್ನೆತ್ತಿದ್ದಾರೆ. ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ. ಇಡೀ ರಾಜ್ಯದ ನದಿಗಳೆಲ್ಲಾ ತಮ್ಮ ಸೌಂದರ್ಯವನ್ನು ಕಳೆದುಕೊಳ್ಳುತ್ತಿವೆ. ಕಾವೇರಿ, ಕಪಿಲಾ, ಈ ರೀತಿ ಎಲ್ಲಾ ನಮ್ಮ ಮೈಸೂರು ಜಿಲ್ಲೆ, ಎಲ್ಲಾ ಕಡೆಯೂ ನಿರಂತರವಾಗಿ ಮರಳನ್ನು ತೆಗೆಯುತ್ತಿದ್ದಾರೆ. ಮಳೆ ಬರುವ ಮೊದಲೇ ಸಾವಿರಾರು ಲೋಡ್ ಮರಳನ್ನು ತೆಗೆದಿಟ್ಟುಕೊಳ್ಳುತ್ತಾರೆ ಮತ್ತು ಅದನ್ನು ಮಾರುತ್ತಿದ್ದಾರೆ. ಈ ಪ್ರಕಾರ ಆ ನದಿಗಳ ಪಾತ್ರವೇ ಹಾಳಾಗುತ್ತಿದೆ. ಇದರ ಬಗ್ಗೆ ಸರ್ಕಾರ ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಪ್ರಯತ್ನಪಡಬೇಕು. ಇಲ್ಲದಿದ್ದರೆ, ದೊಡ್ಡ ತೊಂದರೆ ಅನಾಹುತವಾಗುತ್ತದೆ. ಒಂದು ಕಡೆ, ಗ್ಯಾನೈಟ್‌ನಿಂದ ನಿಸರ್ಗ ನಾಶವಾಗುತ್ತಿದೆ, ಇನ್ನೊಂದೆಡೆ ಮರಳಿನಿಂದ ಈ ನದಿಗಳು ತಮ್ಮ ಸೌಂದರ್ಯವನ್ನು ಕಳೆದುಕೊಳ್ಳುತ್ತಿವೆ. ಇದರ ಬಗ್ಗೆ ಸಮಗ್ರ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅದನ್ನು ಮಾನ್ಯ ಸಚಿವರು ಚರ್ಚೆಗೆ ಮಾಡುವುದಾದರೆ, ಒಂದು ಅವಕಾಶ ಕೊಡಿ ಎಂದು ನಾನು ಕೇಳುತ್ತಿದ್ದೇನೆ ಮತ್ತು ಇದು ಅನ್ಯಾಯ. ಇದರ ಬಗ್ಗೆ ಎಲ್ಲಾ ನದಿಗಳ ಪಾತ್ರದಲ್ಲಿ ತೆಗೆಯುವ ಮರಳನ್ನು ನಿಲ್ಲಿಸುತ್ತೇವೆಂದು ಸ್ಪಷ್ಟವಾಗಿ ಸೂಚನೆಯನ್ನು ತಾವು ಕೊಡಬೇಕೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಛೇರ್ಮನ್‌ರವರೆ, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ತುಂಗಾ ನದಿಯಲ್ಲಿ ಒಟ್ಟು 29 ಸಾದಾ ಉಸುಕಿನ ಗುತ್ತಿಗೆಗಳಿರುತ್ತವೆ. ಅನಧಿಕೃತ ಮರಳಿನ ಸಾಗಾಣಿಕೆಯನ್ನು ತಡೆಗಟ್ಟಲು ಇಲಾಖೆಯು ಕ್ರಮ ಕೈಗೊಂಡಿದ್ದು 1996-97ನೇ ಸಾಲಿನಲ್ಲಿ 24,450 ರೂಪಾಯಿಗಳ ದಂಡವನ್ನು ವಸೂಲು ಮಾಡಲಾಗಿದೆ. ಅದಲ್ಲದೆ, ತೀರ್ಥಹಳ್ಳಿಯ ತಹಶೀಲ್ದಾರ್‌ರವರು ಇದರ ಬಗ್ಗೆ ಕ್ರಮ ಕೈಗೊಂಡಿದ್ದು, 13,450 ರೂಪಾಯಿಗಳನ್ನು ದಂಡವಾಗಿ 1996-97ನೇ ಸಾಲಿನಲ್ಲಿ ವಸೂಲು ಮಾಡಿರುತ್ತಾರೆ.

12.50 ಪಿ.ಎಂ

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಾದಾ ಮರಳು ಬಹುತೇಕ ಭಾಗ ಶಿವಮೊಗ್ಗ ಪಟ್ಟಣಕ್ಕೆ ಬರುತ್ತಿದ್ದು ಇದರ ತಪಾಸಣೆ ನಡೆಸಲು ಇಲಾಖೆಯ ಸಿಬ್ಬಂದಿಯನ್ನು ಗಾಜನೂರು ಅರಣ್ಯಪ್ರದೇಶದಲ್ಲಿ ನೇಮಕ ಮಾಡಲಾಗಿದೆ. ಇಲಾಖೆಯ ಅಧಿಕಾರಿ ಸಿಬ್ಬಂದಿಯವರು ಅನಧೀಕೃತ ಮರಳು ಸಾಗಾಣಿಕೆಯಲ್ಲಿ ಶಾಮೀಲಾಗಿರುವ ಬಗ್ಗೆ ಮಾಹಿತಿ ಇಲಾಖೆಯಲ್ಲಿ ಇರುವುದಿಲ್ಲ. ಒಂದೇ ಬಿಲ್ಲಿನಲ್ಲಿ ಅನೇಕ ಲೋಡ್‌ಗಳು ಹೋಗುವುದು, ನಕಲಿ ಪರವಾನಗಿ ತಯಾರಿಸಿ ಹೊಡೆಯುವುದು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಈ ಬಗ್ಗೆ ವಿವರಣೆ ನೀಡಿದ್ದಲ್ಲಿ ತಕ್ಷಣ ಕ್ರಮ ಜರುಗಿಸಲಾಗುವುದು.

ಮಾನ್ಯ ಅಧ್ಯಕ್ಷರೇ, ಇದು ಮಾನ್ಯ ಸದಸ್ಯರ ಶೂನ್ಯ ವೇಳೆಯ ವಿಚಾರಕ್ಕೆ ಭೂವಿಜ್ಞಾನ

ಇಲಾಖೆಯ ಮಂತ್ರಿಗಳ ಹೇಳಿಕೆ. ಮಾನ್ಯ ಶ್ರೀರಾಮರೆಡ್ಡಿಯವರು, ವಾಟಾಳ್ ನಾಗರಾಜ್‌ರವರು ಎತ್ತಿರತಕ್ಕಂಥ ವಿಚಾರ ಏನಿದೆ, ಇದು ಸರಿಯಿದೆ. ಏಕೆಂದರೆ ಬೆಂಗಳೂರಿನ ಸುತ್ತಮುತ್ತ ಇರತಕ್ಕಂಥ ಅನೇಕ ತಾಲ್ಲೂಕುಗಳಲ್ಲಿ ಸಹಿತ ಅನೇಕ ಹೊಳೆಗಳು ಹರಿಯುತ್ತಿವೆ. ಹೊಳೆಯಿಂದ ಮರಳನ್ನು ಎತ್ತುವುದರಿಂದ ಬಹಳ ತೊಂದರೆಯಾಗುತ್ತಿದೆ. ಈ ಮರಳನ್ನು ಎತ್ತುವುದರಿಂದ ಹೊಳೆಯ ಪಕ್ಕದಲ್ಲಿ ಇರತಕ್ಕಂಥ ಎಲ್ಲಾ ತೋಟಗಳಿಗೆ ಸಹಿತ ತೊಂದರೆಯಾಗುತ್ತಿದೆ. ರೈತರಿಗೆ ಸಹಿತ ತೊಂದರೆಯಾಗುತ್ತಿದೆ. ಇದರ ಬಗ್ಗೆ ಒಂದು ಪರಿಣಾಮಕಾರಿಯಾದ, ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು ಎನ್ನುವುದನ್ನು ಸರ್ಕಾರ, ನಾವು ಸ್ವಾಗತ ಮಾಡುತ್ತೇವೆ. ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗತಕ್ಕಂಥಾದ್ದು ಒಳ್ಳೆಯದು. ಎರಡು ವಿಚಾರಗಳಲ್ಲಿ, ಒಂದನೆಯದು ಮರಳು ಸಾಗಾಣಿಕೆ ಮಾಡತಕ್ಕದ್ದು ಮತ್ತು ಬೋರ್‌ವೆಲ್‌ಗಳನ್ನು ಬಹಳ ಪ್ರಮಾಣದಲ್ಲಿ ಹಾಕತಕ್ಕಂಥಾದ್ದು. ಈ ಎರಡರ ಬಗ್ಗೆ ಸಹಿತ ಬಹಳ ತೊಂದರೆಯಾಗುತ್ತಿದೆ. ಇದರ ಬಗ್ಗೆ ಚರ್ಚೆಯನ್ನು ನಾವು ಸ್ವಾಗತ ಮಾಡುತ್ತೇವೆ. ಮಾನ್ಯ ಜ್ಞಾನೇಂದ್ರ ಅವರು ಕೆಲವು ಗುರುತರವಾದ ಆಪಾದನೆಗಳನ್ನು ಏನು ಮಾಡಿದ್ದಾರೆ, ಅವರು ಹೇಳಿರತಕ್ಕಂಥ ವಿಚಾರಗಳ ಆಧಾರದ ಮೇಲೆ ಸರ್ಕಾರ ಒಂದು ವಿಚಾರಣೆಗೆ ಆಜ್ಞೆ ಮಾಡುತ್ತದೆ. ತಕ್ಷಣವಾಗಿ ಅಲ್ಲಿರತಕ್ಕಂಥ ಭೂವಿಜ್ಞಾನಿಯನ್ನು ವರ್ಗಾವಣೆ ಮಾಡಲಾಗಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಗ್ರಾಮೀಣಾಭಿವೃದ್ಧಿ ಸಚಿವರು ಇದರ ಬಗ್ಗೆ ಗಮನ ಹರಿಸಿದರೆ ಮರಳು ಸಮಸ್ಯೆ ಬಗೆಹರಿಯುತ್ತದೆ.

ಚೇರಮನ್: ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅರ್ಧನಿಮಿಷದಲ್ಲಿ ಹೇಳಿಬಿಡುತ್ತೇನೆ. ಈ ಪಾಕೃತಿಕ ಸಂಪತ್ತು ಆಯಾಯ ಪಂಚಾಯತಿಯ ಸ್ವತ್ತು ಆಗಿ ಮಾಡಿದರೆ ಅವರು ಅದರ ಮೇಲೆ ನಿಯಂತ್ರಣ ಮಾಡಬಹುದು, ಅದರಿಂದ ಬರತಕ್ಕಂಥ ಆದಾಯವನ್ನು ಅವರು ಉಪಯೋಗಿಸಿಕೊಳ್ಳಬಹುದು. ಆಗ ಇದು ಲಿಮಿಟ್ ಆಗಿ ಅನುಕೂಲವಾಗುತ್ತದೆ. ದಯವಿಟ್ಟು ಇದರ ಬಗ್ಗೆ ತಾವು ಯೋಚನೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎಂ.ಸಿ.ಪ್ರಕಾಶ್: ಮಾನ್ಯ ಸದಸ್ಯರ ಸಲಹೆ ಯೋಗ್ಯವಾಗಿದ್ದರೂ ಕೂಡ ಅದು ಅಷ್ಟು ಕಾರ್ಯಸಾಧು ಮತ್ತು ಸುಲಭವಾಗಿರತಕ್ಕಂಥಾದ್ದು ಅಲ್ಲ. ಏಕೆಂದರೆ ಬೇರೆಬೇರೆ ಇಲಾಖೆಗಳಿಗೆ ಸಂಬಂಧಿಸಿದ ಒಂದು ವ್ಯವಸ್ಥೆ ಇರುತ್ತದೆ. ಗಣಿ ಮತ್ತು ಭೂಗರ್ಭ ಇಲಾಖೆಯವರು ಸ್ವಾಮ್ಯವಾಗಿರತಕ್ಕಂಥ ಒಡೆತನ ಮತ್ತು ಹಕ್ಕನ್ನು ಪಡೆದಿರುತ್ತಾರೆ. ಆದ್ದರಿಂದ ಬರೇ ಗ್ರಾಮಪಂಚಾಯತಿಗೆ ಹಕ್ಕು ಕೊಡುತ್ತೇನೆ ಎನ್ನುವುದಾದರೆ ಕೆಳಮಟ್ಟದಲ್ಲಿ ಏನು ಆಗುತ್ತಿದೆ ಎಂಬುದು ತಮಗೆ ಗೊತ್ತಿದೆ. ಆದರೆ ಅದು ಒಂದು ಮಾರ್ಗಸೂಚಿಯಾಗಿ ತೆಗೆದುಕೊಳ್ಳಬೇಕು ಎನ್ನುವುದಾಗಿದ್ದರೆ ಇದು ಒಂದು

ಯೋಗ್ಯವಾದಂಥ ಸಲಹೆ. ಸರ್ಕಾರ ಅದನ್ನುಪರಿಶೀಲನೆ ಮಾಡಬಹುದು.

ಶ್ರೀ ಆರಗ ಜ್ಞಾನೇಂದ್ರ: ಖಂಡಿತ ಗ್ರಾಮಪಂಚಾಯತಿಗಳಿಗೆ ಕೊಟ್ಟರೆ ತುಂಬಾ ಒಳ್ಳೆಯದಾಗುತ್ತದೆ. ಅದೇ ಮಂಡಗದ್ದೆ ಗ್ರಾಮಪಂಚಾಯತಿ ಒಂದೇ ವರ್ಷದಲ್ಲಿ ಮೂರು ಲಕ್ಷ ರೂಪಾಯಿ ಸಂಗ್ರಹ ಮಾಡಿತ್ತು.

ಶ್ರೀ ಎಂ.ಸಿ.ಪ್ರಕಾಶ್: ಹಿಂದೆ ಕನಕಪುರದಿಂದ ಕಲ್ಲು ಹೋಗುವಾಗ ರೈತ ಸಂಘದವರು ಅಲ್ಲಿ ನಿರ್ಬಂಧವನ್ನು ಮಾಡಿದ್ದರು. ಕೆಲವು ಪಂಚಾಯತಿಗಳು ಅನಧೀಕೃತವಾದಂಥ ರೀತಿಯಲ್ಲಿ ಸರ್ಕಾರದ ವತಿಯಿಂದ ಪಡೆಯಲು ದಾರಿ ಮಾಡಿದ್ದರಿಂದ ಅವರು ಪಡೆಯುತ್ತಿದ್ದಾರೆ. ಆದರೆ ಇದನ್ನು ಗ್ರಾಮಪಂಚಾಯತಿ ಮಟ್ಟದಲ್ಲಿ ಬಿಡಬೇಕೇ ಬೇಡವೇ ಎನ್ನುವ ವಿಚಾರದಲ್ಲಿ ಸರ್ಕಾರ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರಸಾಧಕಬಾಧಕಗಳು ಏನು ಎನ್ನುವುದರ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ಆದ್ದರಿಂದ ಇದು ಒಂದು ಯೋಗ್ಯವಾದ ಸಲಹೆ ಎಂದು ಸಧ್ಯದ ಮಟ್ಟಿಗೆ ನಾನು ಉತ್ತರವನ್ನು ಕೊಡಬಲ್ಲೆ.

ಶ್ರೀಮತಿ ಎನ್.ಜ್ಯೋತಿರೆಡ್ಡಿ: ಅಧ್ಯಕ್ಷರೇ, ಈ ಮರಳು ಸಾಗಾಣಿಕೆ ಬಗ್ಗೆ ನನ್ನ ತಾಲ್ಲೂಕಿನಲ್ಲಿ ಸಹಿತ ತೊಂದರೆ ಇದೆ. ಅಲ್ಲಿ ಪಿನಾಕಿನಿ ನದಿ ಒಂದಿದೆ. ಅದರಲ್ಲಿ ಯಾವಾಗಲೂ ಮರಳು ಸಾಗಾಣಿಕೆ ನಡೆಯುತ್ತಿರುತ್ತದೆ. ಹಾಗಾಗಿ ಅಲ್ಲಿ ರೈತರು ಅದಕ್ಕೆ ಅಡ್ಡಿ ಮಾಡುತ್ತಾಇರುತ್ತಾರೆ. ಇದರಿಂದ ಯಾವಾಗಲೂ ಗಲಾಟೆ ಇರುತ್ತದೆ. ಲಾರಿಗಳು ಬಂದು ತುಂಬಿಕೊಂಡು ಹೋಗುವುದು, ಜನರು ಗಲಾಟೆ ಮಾಡಿ ಲಾರಿಯನ್ನು ಹೊಡೆದುಹಾಕುವುದು ನಡೆಯುತ್ತದೆ. ಪೊಲೀಸರಿಗೆ ಹೇಳಿದರೆ ಸರ್ಕಾರದವರು ಒಂದು ಸಾವಿರ ರೂಪಾಯಿ ಕಾಂಟ್ರಾಕ್ಟ್ ರಾಯಲ್ಟಿ ನಿಗದಿಪಡಿಸಿದ್ದನ್ನು ಕಟ್ಟಿಸಿಬಿಟ್ಟು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಇದೆಯೆಂದು ಅವರು ಹೇಳುತ್ತಾರೆ. ಹೀಗಾಗಿ ದಿನನಿತ್ಯ ಹಳ್ಳಿಗಳಲ್ಲಿ ತುಂಬಾ ಗಲಾಟೆ ಆಗುತ್ತಿರುತ್ತದೆ. ಆದ್ದರಿಂದ ಇದರ ಬಗ್ಗೆ ದೀರ್ಘವಾದಂಥ ಚರ್ಚೆಗೆ ಅವಕಾಶವನ್ನು ಕಲ್ಪಿಸಿಕೊಟ್ಟು ಸರ್ಕಾರ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸಹ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಜ್ಞಾನೇಂದ್ರ ಅವರು ಏನು ಆಪಾದನೆ ಮಾಡಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ತಕ್ಷಣ ಸಂಬಂಧಪಟ್ಟ ಜಿಯಾಲಜಿಸ್ಟ್‌ನ್ನು ಅಲ್ಲಿ ವರ್ಗಾವಣೆ ಮಾಡಿದ್ದೇವೆ. ಮತ್ತೆ ತಾವು ಏನು ಆಪಾದನೆಗಳನ್ನು ಮಾಡಿದ್ದೀರಿ, ಇದರ ಬಗ್ಗೆ ವಿಚಾರಣೆಗೆ ಸರ್ಕಾರ ಒಪ್ಪಿಕೊಂಡಿದೆ. ಇವತ್ತೇ ವಿಚಾರಣೆಗೆ ಸಹಿತ ಆಜ್ಞೆಯನ್ನು ಮಾಡುತ್ತೇವೆ. ಶ್ರೀಮತಿ ರೆಡ್ಡಿಯವರು ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅನೇಕ ಗೌರವಾನ್ವಿತ ಸದಸ್ಯರುಗಳು ಸಲಹೆಗಳನ್ನು ಏನು ಕೊಟ್ಟಿದ್ದಾರೆ, ಇದರ ಬಗ್ಗೆ ಅರ್ಧಗಂಟೆ-ಒಂದು ಗಂಟೆ ಚರ್ಚೆಮಾಡಬಹುದು. ಏಕೆಂದರೆ ಇದು ನಿಜವಾಗಿಯೂ ಒಂದು ದೊಡ್ಡ ಸಮಸ್ಯೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಮತ್ತೊಂದು

ವಿಚಾರ ಕೂಡ ಇದೆ. ಮರಳು ಬೇರೆ ಎಲ್ಲಿಗೂ ಸಹಿತ ಹೋಗುವುದಿಲ್ಲ. ನಾವು ಬಿಲ್ಡಿಂಗ್‌ಗಳನ್ನು ಕಟ್ಟಲಿಕ್ಕೆ ಅದನ್ನು ಉಪಯೋಗಿಸತಕ್ಕದ್ದು ಇದೆ. ಇವೆರಡರ ನಡುವೆ ಎಲ್ಲೋ ಒಂದು ಕಾಂಪ್ರಮೈಸ್‌ನ್ನು ನಾವು ಮಾಡಬೇಕಾಗುತ್ತದೆ. ಆದ್ದರಿಂದ ಎರಡೂ ಕಡೆಯ ಸದನದ ಸದಸ್ಯರುಗಳು ಸಲಹೆಗಳನ್ನು ಕೊಡಲಿ. ಅದರ ಆಧಾರದ ಮೇಲೆ ಸರ್ಕಾರ ಒಂದು ನೀತಿಯನ್ನು ನಿರೂಪಣೆ ಮಾಡಲಿಕ್ಕೆ ಅನುಕೂಲವಾಗುತ್ತದೆ.

(ಊ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ 20 ಸಾವಿರ ಕೋಟ ರೂಪಾಯಿಗೂ ಹೆಚ್ಚು ಹಣ ದಲ್ಲಾಳಿಗಳು ಹಾಗೂ ಮಧ್ಯವರ್ತಿಗಳು ಕೈವಶವಾಗಿರುವುದು.

+ ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೇ, ಈಗತಾನೆ ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ 20 ಸಾವಿರ ಕೋಟಿಗೂ ಹೆಚ್ಚು ಹಣ ಈ ದಲ್ಲಾಳಿಗಳು, ಮಧ್ಯವರ್ತಿಗಳ ಕೈವಶವಾಗಿದೆ ಎನ್ನತಕ್ಕಂಥ ಮಾತನ್ನೂ ಕೂಡ ಹೇಳಿದರು. ಅದಕ್ಕೆ ಪೂರಕವಾಗಿ ಇವತ್ತು ಬಿ.ಡಿ.ಎ.ಯನ್ನು ವಜಾ ಮಾಡಬೇಕೇ ಬೇಡವೇ ಎನ್ನತಕ್ಕಂಥಾದ್ದರ ಬಗ್ಗೆ ಎಲ್ಲರ ಸಲಹೆ ಪಡೆಯುತ್ತೇನೆ ಎನ್ನುವ ಮಾತನ್ನು ಕೂಡ ಅವರು ಹೇಳಿದರು. ಆದರೆ ಬಹಳ ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿರಬೇಕಾದರೆ, 20 ಸಾವಿರ ಕೋಟಿಯಷ್ಟು ಅಪಮೌಲ್ಯವಾಗಿದೆ, ಇವತ್ತು ಅವ್ಯವಹಾರವಾಗಿದೆ, ದಲ್ಲಾಳಿಗಳ ಪರವಾಗಿದೆ, ದೇಶವಿದೇಶದ ಜನರ ಪಾಲಾಗಿದೆ ಎಂದು ಅವರು ಒಪ್ಪಿರುವಂಥ ಸಂದರ್ಭದಲ್ಲಿ ಅದನ್ನು ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಯಾರದ್ದು? ಅದರ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಇವತ್ತು ಸರ್ಕಾರದ್ದು. ನೇರವಾಗಿ ಮುಖ್ಯಮಂತ್ರಿಗಳು ಅದರ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸಂದರ್ಭ ಇದೆ. ಮತ್ತು ಅದರ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ಇವತ್ತು ಒಬ್ಬ ರಾಜ್ಯ ಸಚಿವರು ಇರಬೇಕಾದರೆ, ಅವರಿಂದ ಒಂದು ಇಂತಹ ಅಪಚಾರ ಆಗಿರತಕ್ಕಂಥ ಒಂದು ಸಂದರ್ಭ ಇದು. ಇವತ್ತು ಎಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿರತಕ್ಕಂಥಾದ್ದು ಇದೆ. ಅದು ಹೇಗೆ? ಇವತ್ತು ಅಪಚಾರ ಆಗಿರುವುದರ ಜೊತೆಗೆ ಮುಖ್ಯಮಂತ್ರಿಗಳು ಹೇಳಿಕೆ ಕೊಡುವ ಸಂದರ್ಭದಲ್ಲಿ ಅವರು ಹೇಳುತ್ತಾರೆ, ಸ್ಪಷ್ಟನೆ ಕೊಡುತ್ತಾರೆ 'ಇವತ್ತು ನಾನು ಅದರಲ್ಲಿ ಭಾಗಿಯಾಗಿಲ್ಲ' ಎಂದು. ನನ್ನದೇನೂ ತಪ್ಪಿಲ್ಲ ಎನ್ನತಕ್ಕಂಥ ಮಾತನ್ನೂ ಕೂಡ ತಾವು ಹೇಳಿದ್ದೀರಿ. ನಾನು ಒಂದನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಅಧ್ಯಕ್ಷರೇ, ವಿಷಯ ಇಷ್ಟೇ. ಬನ್ನೇರು ಘಟ್ಟ ರಸ್ತೆಯಲ್ಲಿ ಬೇಗೂರು ಎನ್ನತಕ್ಕಂಥ ಊರಿನಲ್ಲಿ 4.39ಎಕರೆ ಜಮೀನನ್ನು ವಾಣಿಜ್ಯ ಬಳಕೆಗೆ ಅನುಮತಿಯನ್ನು ಕೊಟ್ಟು ಕೇವಲ ಎರಡು ವರ್ಷವಾಗಿದೆ. ಅದನ್ನು ಕೊಟ್ಟಮೇಲೆ ಕನ್‌ವರ್ಶನ್ ಆದಮೇಲೆ-it attracts the provisions of the Urban Land (Ceiling and Regulation) Act. ಒಂದು ಸಾವಿರ ಮೀಟರ್‌ನ ವ್ಯಾಪ್ತಿಗಿಂತ ಹೆಚ್ಚು ಪ್ರದೇಶ ಇದ್ದರೆ ಅದು ಸರ್ಕಾರದ ವಶ